ಶ್ರೀ ಕೆ. ವಿ. ಶಂಕರಗೌಡ.—ಅಡಲ್ಟ್ ಲಿಟರೆಸಿಗೆ ಒಂದು ಲಕ್ಷ ಕೊಟ್ಟಿದ್ದೇವೆ. ಈ ವರ್ಷ 1·4 ಲಕ್ಷ ಮಾಡಿದ್ದೇವೆ. ಲೈಬ್ರರಿಗೆ 60 ಸಾವಿರ ರೂಪಾಯಿ ಕೊಡಬೇಕು ಎಂದು ನಿರ್ಧಾರ ಮಾಡಿದ್ದೇವೆ. ಸಿಬ್ಬಂದಿಗೂ ಖರ್ಚಾಗುತ್ತದೆ, ಅಡಲ್ಟ್ ಲಿಟರಸಿ ಕ್ಲಾಸ್ ಮಾಡುವುದಕ್ಕೂ ಖರ್ಚಾಗುತ್ತದೆ, ಲೈಬ್ರರಿಗಳಿಗೂ ಖರ್ಚಾಗುತ್ತದೆ.

Sri B. B. SAYANAK.—May I know many adult educataion bodies are there in the State and whether Government is going to amalgamate them all ?

Sri K. V. SHANKARA GOWDA.—There is one in old Mysore and another in the integrated parts. We are going to amalgamate both of them and we are also thinking of having a statutory body for the whole of Mysore State.

Sri KONDAJJI BASAPPA,—What is the total number of Vidyapeethas ?

Sri K. V. SHANKARA GOWDA.—I have no information about that. If the hon. Member puts a separate question I will be able to get the information.

## Darkhast land granted in Bangarpet Taluk

563. Sri K. M. PUTTASWAMY (Chickaballapur).—

Will the Minister for Revenue be pleased to state :—

(*a*) the extent of land granted under Darkhast Rules within a radius of five miles from the location of Bharath Earth Movers Factory in Bangarpet Taluk during the years 1962 to 1967 ;

(*b*) the number of persons to whom the land has been granted and the value received ;

(*c*) whether these persons are cultivating these lands ?

Sri H. V. KOUJALGI (Minister for Revenue).—

| | A. | G. |
|---|---|---|
| (*a*) | 118 | 00. |

(*b*) 162 persons to 141 for non-agricultural purposes and 21 for Agricultural purposes . Upset price recovered Rs. 10,450–50

(*c*) Out of 21 persons granted land for agricultural purposes 18 are cultivating the lands.

ಶ್ರೀ ಕೆ. ಎಂ. ಪುಟ್ಟಸ್ವಾಮಿ.—ದರಖಾಸ್ತು ನಿಯಮಗಳ ಮೇರೆಗೆ ನೀಡಿರುವ ಜಮೀನನ್ನು ಕೆಲವರು ಒಂದು ಎಕರೆಗೆ 10 ಸಾವಿರ ರೂಪಾಯಿ ಪ್ರಕಾರ ಕಾರ್ಖಾನೆಗಳವರಿಗೆ ಮಾರಾಟ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ವಿ. ಕೌಜಲಗಿ.—ಮಾನ್ಯ ಸದಸ್ಯರು ಅಂಥ ವಿಚಾರವನ್ನು ಸರ್ಕಾರದ ಗಮನಕ್ಕೆ ದಯಮಾಡಿ ತಂದರೆ ಆ ಬಗ್ಗೆ ವಿಚಾರ ಮಾಡಬಹುದು.

ಶ್ರೀ ಕೆ. ಎಂ. ಪುಟ್ಟಸ್ವಾಮಿ.—ಸ್ಥಳದಲ್ಲಿರುವ ಅಧಿಕಾರಿಗಳಿಂದ ಸರ್ಕಾರದವರು ಮಾಹಿತಿಯನ್ನು ಪಡೆದುಕೊಂಡು ಯಾರು ವಾರಾಚ ಮಾಡಿವ್ದಾರೆ ಅಂಥ ಜಮೀನನ್ನು ಸರ್ಕಾರಕ್ಕೆ ವಶ ಪಡಿಸಿಕೊಳ್ಳುವುದಕ್ಕೆ ಅಡ್ಡಿ ಆತಂಕ ಏನಿದೆ ಸ್ವಾಮಿ ?

ಶ್ರೀ ಎಚ್. ವಿ. ಕೌಜಲಗಿ.—ಕೆಲವು ವಿಷಯಗಳು ಸರ್ಕಾರದ ಗಮನಕ್ಕೆ ಬಂದಿವೆ. ನಾವೂ ಕೂಡ ಚರ್ಚಿಸಿ ನಡೆಸಿದ್ದೇವೆ. ಸಾವಿರಾರು ಎಕರೆ ಸಾವಿರಾರು ಜನರಿಗೆ ಕೊಟ್ಟಿರುವುದರಿಂದ ಅವುಗಳನ್ನೆಲ್ಲ ಸರಿಯಾಗಿ ವಿಚಾರ ಮಾಡುವುದು ಕಷ್ಟವಾಗುತ್ತದೆ.

ಶ್ರೀ ಇ. ನಾರಾಯಣ ಗೌಡ.—ಸಾಧಾರಣವಾಗಿ 50–60 ಜನ ರೈತರಿಗೆ ಹಂಚಿರುವ ಭೂಮಿಗೆ ಸಾಗುವಳಿ ಚೀಟಿಯನ್ನು ಕೊಡತಕ್ಕ ಸಮಯದಲ್ಲಿ ಸರ್ಕಾರದವರು ಸ್ಪೇ ಮಾಡಿರುವುದು ನಿಜವೇ ? ಹಾಗಿದ್ದರೆ ಸ್ಪೇ ತೆಗೆದು ರೈತರಿಗೆ ಸಾಗುವಳಿ ಚೀಟಿಕೊಡುವ ವ್ಯವಸ್ಥೆ ಮಾಡರಾಗುತ್ತದೆಯೇ ?

ಶ್ರೀ ಎಚ್. ವಿ. ಕೌಜಲಗಿ.—1967ನೇ ಇಸವಿ ನಂತರ ಕೆಲವು ಭೂಮಿ ಕೊಟ್ಟಿದ್ದು ಅವರಿಗೆ ಸಾಗುವಳಿ ಚೀಟಿ ಕೊಟ್ಟಿದ್ದಿಲ್ಲ. ಅವರಿಗೆ ಕೊಟ್ಟಿರುವುದು ಸರಿಯಾಗಿಲ್ಲ ಎನ್ನುವ ದೂರುಗಳು ಬಂದಾಗ, ಅವುಗಳನ್ನು ವಿಚಾರ ಮಾಡಿದಾಗ ಕೆಲವೊಂದು ದೂರುಗಳು ನಿಜವಿದ್ದು, ಕಾಯಿದೆಯ ಪ್ರಕಾರ ಆ ರೀತಿ ಕೊಟ್ಟಿದ್ದುದನ್ನು ರದ್ದು ಮಾಡಿದ್ದರಿಂದ ಸಾಗುವಳಿ ಚೀಟಿಯನ್ನುಕೊಡಲಿಲ್ಲ. ಹೊಸದಾಗಿ ಲ್ಯಾಂಡ್ ಗ್ರ್ಯಾಂಟ್ ರೂಲ್ಸ್ ಮಾಡಿರುವ ಪ್ರಕಾರ ಅದನ್ನು ಹಂಚಬೇಕಾಗುತ್ತದೆ.

ಶ್ರೀ ಇ. ನಾರಾಯಣ ಗೌಡ.—ಕಾಯಿದೆಗೆ ವಿರೋಧವಾಗಿ ಕೊಟ್ಟಿದ್ದಾರೆ ಎಂದು ಹೇಳಿದರು. ಯಾವ ರೀತಿಯಿಂದ ಕಾಯಿದೆಗೆ ವಿರೋಧವಾಗಿ ಮಾಡಿದರು ಎಂದು ತಿಳಿಸುತ್ತಾರೆಯೇ ?

ಶ್ರೀ ಎಚ್. ವಿ. ಕೌಜಲಗಿ.—ಹೈ ಕೋರ್ಟಿನ ಕೆಲವು ತೀರ್ಮಾನಗಳ ಪ್ರಕಾರ ಮುಂತ್ರಿಗಳಿಗೆ ಕೊಡಲಿಕ್ಕೆ ಅಧಿಕಾರವಿಲ್ಲ, ರಿಕಾರ್ಡ್ ಬಿಲ್ಟ್ ಅಪ್ ಮಾಡದೆ ಕೊಟ್ಟಿದ್ದರು, ಹೀಗೆ ಅನೇಕ ದೋಷಗಳಿದ್ದುವು.

ಶ್ರೀ ಕೆ. ಎಂ. ಪುಟ್ಟಸ್ವಾಮಿ.—ಯಾವುದಾದರೂ ದೊಡ್ಡ ಕಾರ್ಖಾನೆ ಇದ್ದರೆ ಅದರ ಸುತ್ತ ಮುತ್ತ ಐದು ಮೈಲಿ ಪ್ರದೇಶದಲ್ಲಿ ಬಹಳ ಬೆಲೆ ಬರುತ್ತದೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ ? ಹಾಗಿದ್ದರೂ ಆ ಸಮಯದಲ್ಲಿ ಸರ್ಕಾರದವರು ನೇರವಾಗಿ ಜಮೀನನ್ನು ಹಂಚಿರುವುದರಲ್ಲಿ ಇರುವ ಒಳ ಉದ್ದೇಶವೇನು ಎನ್ನುವುದನ್ನು ತಿಳಿಸುತ್ತಾರೆಯೇ ?

ಶ್ರೀ ಎಚ್. ವಿ. ಕೌಜಲಗಿ.—1968ನೇ ಇಸವಿಗೆ ಪೂರ್ವದಲ್ಲಿ ಅಪ್ಲಿಕೇಶನ್ ರೂಲ್ಸ್ ಇದ್ದಿಲ್ಲ. 1968ರ ನಂತರ ಕಾರ್ಖಾನೆಗಳಿಗೆ ಮತ್ತು ನಗರಗಳಿಗೆ ಎರಡು ಮೂರು ಮೈಲಿ ಪ್ರದೇಶದಲ್ಲಿರುವ ಭೂಮಿಯನ್ನು ಕೊಡಬಾರದು ಎನ್ನುವ ಕೆಲವು ನಿಯಮಗಳನ್ನು ಮಾಡಲಾಗಿದೆ. ಹೊಸ ನಿಯಮಗಳು ಬರುವ ಮೊದಲೇ ಕೊಟ್ಟಿರುವುದರಿಂದ ಹೀಗಾಗಿರಬಹುದು.

ಶ್ರೀ ಕೆ. ಎಂ. ಪುಟ್ಟಸ್ವಾಮಿ.—ಹಿಂದೆ ಸರ್ಕಾರದವರು ಮಾಡಿರುವ ತಪ್ಪಿಗೆ ಈಗ ಮಂತ್ರಿಗಳು ಕ್ಷಮೆ ತೋರಿಸಿ ಉತ್ತರ ಕೊಡುತ್ತಿರುವುದಕ್ಕೆ ಇದರ ಒಳ ಉದ್ದೇಶವೇನು ?

Mr. DEPUTY SPEAKER.—That question does not arise.

9–00 A.M.

## Night Service buses between Bangalore and Mangalore

575. Sri B. M. IDINABBA (Mangalore).—

Will the Minister for Transport be pleased to state :—

(*a*) whether there are night service Government Luxury buses plying from Mangalore–Bangalore ; Bangalore–Mangalore ;

(*b*) the number of buses that are plying and their timings ;